(155) 2

Registered No. B G 182

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಿಂದ

ಶ್ರೀ ಗೋರಕ್ಷಣಾ
GORAKSHANA

16 ನೇ ವರ್ಷ — 1965 ನೇ ಆಗಸ್ಟ್ 23 August 1965

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

★

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣದಯೆ, ತಾಖುತಾಹಾರ, ಪಶುವೈದ್ಯ ಎಂಬ ಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ 30 ನ್ಯೆ ಪೈ

ಸಹಾಯಕರು ರೂ 10, ಪ್ರೋತ್ಸಾಹಕರು ರೂ 25 : (ಒಂದು ಸಾರಿಯಷ್ಟಾದರೂ)

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕ ವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು, ಚಾಮರಾಜಪುರಂ, ಮೈಸೂರು 4

ಶ್ರೀ ಕೃಷ್ಣನ ಮಹಿಮೆ

(ಬಿ ಜಿ ಶಾಸ್ತ್ರಿ, ವಿದ್ಯಾರಣ್ಯಪುರ, ಮೈಸೂರು)

ದ್ವಾಪರ ಯುಗದೊಳು ಕೃಷ್ಣನು ಬಂದನು | ಧರ್ಮವ ತಿಳಿಸಲು ಭಾರತಕೆ || ದೇವಕಿ ದೇವಿಯ ಅಷ್ಟಮ ಗರ್ಭದಿ | ಅಷ್ಟಮಿ ತಿಥಿಯೊಳು ಜನಿಸಿದನು ॥ ೧ ॥

ರೋಹಿಣಿ ತಾರೆಯೊಳು ಜನಿಸಿದನಿರುಳಲಿ ! ಸೆರೆಮನೆಯೊಳಗಿಮದಿಂದ ॥ ವಸುದೇವನ ಶಿಶ ವಾಗಿರುತಲಿ | ಗೋಕುಲಸೇರಿದನಿಂದಿನಲಿ ॥ ೨ ॥

ಗೋಪಿ ಯಶೋಧೆಯು ಶಿಶುವನು ಪಾಲಿಪ | ಕೀರ್ತಿಯುಗಳಿಸಿದಳಿಳೆಯೊಳಗೆ ॥ ಬಾಲನ ಲೀಲೆಯ ನೋಡಿ ಯಶೋಧೆಯು | ಅಚ್ಚರಿಗೊಂಡಳು ಗೋಕುಲದಿ ॥ ೩ ॥

ನಂದನ ಗೋಕುಲ-ನಾಕವು ಆಯಿತು | ನಾಂದ ನೋಡುತ ನಲಿಯುವನು॥ ಬಾಲನ ಬಾಯೊಳು ಲೋಕವ ತೋರುತ ! ಮಾತೆಯ ನಚ್ಚರಿಗೊಳಿಸಿದನು ॥೪॥

ಬಾಲ್ಯದಿ ಕೃಷ್ಣನು ಪೂತನಿ ಕೊಂದನು | ಕಾಳಂದಿಯ ವಿಷ ಧುಮುಕಿದನು ॥ ಕಾಳಿಂಗನ ಹೆಡೆ ಏರುತ ನಾಟ್ಯವನಾಡುತ ಕೊಂದನು ತ್ರಿಕೃಷ್ಣ ॥೫॥

ಗೋಪೀಸ್ತ್ರೀಯರ ಕಾಡುತ ಬೆಳೆದನು | ಪಾಲ್ಬೆಣ್ಣೆಗಳನು ಕದಿಯುತಲಿ॥ ಬೆಣ್ಣೆಯ ತಿನ್ನುತ ಒಲ್ಲದನಾದನು | ಕಂಸನ ಕೊಲ್ಲಲು ಬಾಲ್ಯದಲಿ ॥ ೬ ॥

ಕರಿಗಳ ಕೊಂದನು ಒಟ್ಟಿಗಳುರಿಸಿ | ಶೌರ್ಯವ ತೋರಿದ ಬಾಲ್ಯದಲಿ ॥ ಅಣ್ಣನ ಜೊತೆಯೊಳು ಬೆಳೆಯುತ ಬಾಲ್ಯದಿ | ಕಂಸನ ಕೊಂದನು ಲೀಲೆಯೊಳು॥ ಗೋಕುಲ ಬಾಲರೊಳಾಡುತ ಶ್ರೀ ಹರಿ | ಗೋವ್ಗಳ ಕಾಯ್ದನು ಗೋಕುಲದಿ ॥ ಎಲ್ಲಾ ವಿದ್ಯೆಯ ತಿಳಿಗಾಡುತ ಬಾಲ್ಯದೊಳಾಡುತ | ಬಾಲ್ಯದಿ ಲೀಲೆಯ ತೋರಿದ ಶ್ರೀಕೃಷ್ಣ ॥ ೮ ॥

ಮುರಳಿಯನೂದುತ ತೋರಿ ವಿನೋದವ | ರಾಧೆಯ ವರಿಸಿದ ಗೋಕುಲದಿ ॥ ಭಾವೈಯ್ಯ ಇಂದ್ರನೆಯೊಂದಿಗೆ ಬಾಳುತ ! ಪಗಡೆಯ ನಾಡುತ ಲೀಲೆಯೊಳು ॥ ಗೋವರ್ಧನಗಿರಿ ಎತ್ತಿದ ಬೆಂಳಲಿ ! ಶಿಶುಪಾಲನ ವಧೆಮಾಡಿದನು ॥ ಪಾಂಡವರಿಷ್ಟರು ಪ್ರಾಣವು ಎನ್ನುತ | ದ್ರೌಪದಿ ಮಾನವ ಉಳಿಸಿದನು ॥ ೧೦ ॥

ಖಾಂಡವ ಕಲವನು ನಾಶವ ಮಾಡಲು | ಖಾರತ ಯುದ್ಧವಹೂಡಿದನು ॥ ಸಂಧಿಯ ಸಾಧಿಸಿ ರಾಯಬಂತೆಯಾಗಿ | ಮಹಿಮೆಯ ತೋರಿದನಿಳೆಯೊಳಗೆ ॥೧೧॥

ನಿದಿಗೆ ಮುಕ್ತಿಯನಿತ್ತನು ಶ್ರೀಹರಿ | ಕರ್ಣಗೆ ಧರ್ಮವ ತಿಳಿಸಿದನ ॥ ಉದ್ದಾಮಕ್ರೋಧಿಯ ಪಾಲಿಸಿ | ಮೋಕ್ಷದ ಮಾರ್ಗವ ದೋರಿದನು ॥೧೨॥

ಪಾರ್ಥನ ಮರ್ಮವನರಿಯುತ | ಗೀತೆಯ ಜೋಧಿಸಿ ಅದ್ಭುತ ತೋರಿದನು ॥ ಪಾರ್ಥನ ಶರದಲಿ ಕರ್ಣನ ಕೊಲಿಸಿದ | ಪಾರ್ಥಗೆ ಸಾಂಥಿ ತಾನಾಗಿ ॥

ಭೂರತ ಯುದ್ಧದಿ ಭೀಷ್ಮನ ಗಧೆಯೊಳು | ಕಾಪವರಾಯನ ಕೊಲಿಸಿದ ॥ ಅಮರ ಕೊಲ್ಲುತ ಸುರನರರೆಲ್ಲಂ | ಪಾಲಿಸಿ ಧರ್ಮವನುಳಿಸಿದನು ॥ ೧೪ ॥

ಒದ್ದನ ನಾವದಿ ಕಲಿಯೊಳು ಬಂದನು | ಧರ್ಮವ ತಿಳಿಸವನೆಯೊಳಗೆ॥ ದಪ್ಪರ ನಾಶಕೆ ಧರ್ಮತ ಹೃದಯದಿ | ಶಿಷ್ಟವು ವಾಸಿಪೆ ಸತ್ಯವು ಎಂದನು ಶ್ರೀಕೃಷ್ಣ॥

ಶ್ರೀ ಕೃಷ್ಣ ಪರಮಾತ್ಮನ
ಕೃಪೆಯಿಂದ
" ಗೋ ರ ಕ್ಷ ಣ " ಕ್ಕೆ
16 ನೇ ವರ್ಷ ಪ್ರಾರಂಭವಾಯಿತು

ಅಹಿಂಸೆ

ಪ್ರಾಣಿವಧೆಯು ಮಹಾಪಾಪವೆಂದು ನೀನು ತಿಳಿದಿರುವುದಿಲ್ಲ : ಪ್ರಾಣಿಗಳನ್ನು ಕೊಲ್ಲದಿರುವುದೇ ಅತ್ಯುತ್ತಮ ಧರ್ಮ : ಒಬ್ಬನು ಅಸತ್ಯವನ್ನಾದರೂ ಆಡಬಹುದು. ಆದರೆ ಹಿಂಸೆಯನ್ನು ಎಂದಿಗೂ ಮಾಡಬಾರದು. [ಶ್ರೀ ಕೃಷ್ಣನು ಅರ್ಜುನನಿಗೆ ಮಾಡಿದ ಉಪದೇಶ.

★

ಗೋಪೂಜೆ ಮಾಡುವ ದೇಶವು ಗೋಸಂತಾನದ ಯೋಗಕ್ಷೇಮದ ಕಡೆ ಕಿಂಚಿತ್ತಾದರೂ ಗಮನಕೊಡದಿರುವುದೆ

— ಪ್ರಧಾನಿ ಶಾಸ್ತ್ರಿಗಳು

ಶಾಕಾಹಾರದ ಶ್ರೇಷ್ಠತೆ

ಸೂಕ್ಷ್ಮ ಆಹಾರ ಸಮಸ್ಯೆಗಳು (ಇತ್ತೀಚೆಗೆ ಪೆಟ್ಟಿನ ಪರಿಣಾಮದಲ್ಲಿ ಭೈಷಜ್ಯ ವಿಜ್ಞಾನಶಾಸ್ತ್ರದ ಧ್ಯಾನವನ್ನು ಆಕರ್ಷಿಸುತ್ತಿರುವುವು ; ಹಿಮಾಲಯದ ' ಹಂಜ ' ದೀರ್ಘಜೀವಿಗಳಾಗಿರಲು ಅವು ಹೇರಳವಾಗಿ ತಿನ್ನುವ ಜರದಾಲು ಹಣ್ಣಿನ ಯಾವುದಾದರೂ ಗುಣವು ಕಾರಣವೋ ? ಶಿರೋವಿಕಾರಜನ್ಯ ಭೀಷಣ ಮರಣಸಂಖ್ಯೆಗೆ ಪಾಶ್ಚಿಮಾತ್ಯ ಆಹಾರವು ಕಾರಣವಾಗಿದೆಯೋ ?— ಇದೊಂದು ಸಮಸ್ಯೆಯಾಗಿದೆ.

ಆಹಾರ ಸುಧಾರಣಾ ಶೋಧನೆಯಲ್ಲಿ ತನ್ನ ಜೀವಮಾನವನ್ನೇ ಸಂಪೂರ್ಣವಾಗಿ ಕಳೆದ ಒಬ್ಬ ಅಗ್ರಗಣ್ಯನ 20ನೇ ವಾರ್ಷಿಕೋತ್ಸವವನ್ನು ಫೆಬ್ರವರಿ ತಿಂಗಳಲ್ಲಿ ಮಾಡಲು ವೈದ್ಯರಲ್ಲಿ ಅತಿಶಯವಾಗಿ ಪ್ರಸಾರವಿರುವ ಮಕ್ಕು ಮಾನ್ಯತೆ ಪಡೆದಿರುವ ' ದಿ ವಾಕ್ಟಿಷನರ್ ' ಎಂಬ ಸಾವಯವ ಪತ್ರಿಕೆಯು ಏರ್ಪಡಿಸಿತ್ತು.

ಈ ಮಹಿಮನು ವಿಲಿಯಂ ಲ್ಯಾಂಬ್ ಎಂ ಡಿ, ಎಂಬಾತನು, ರಾಯಲ್ ಕಾಲೇಜ್ ಆಫ್ ಫಿಜಿಷಿಯನ್ಸ್ ಸಂಸ್ಥೆಯ ಫೆಲೋ ಆಗಿದ್ದನು ; ತನ್ನ 83 ನೇ ವಯಸ್ಸನ್ನು ದಾಟಿದ ನಂತರ 1847 ರಲ್ಲಿ ಮೃತನಾದನು ; : ಆಗಿನಕಾಲದಲ್ಲಿ ಇಷ್ಟು ದೀರ್ಘಕಾಲ ಜೀವಿಸಿದವರು ವಿರಳ ; ವಯಸ್ಸಾದ ಜೀವನಕ್ಕೆ ಶಾಕಾಹಾರವೇ ಶ್ರೇಷ್ಠ ಮತ್ತು ಬಹು ಜಲಪಾನ ಆಪಾಯಕರ ಎಂದು ಘೋಷಿಸುತ್ತಾನೆ.

(ಮುಂದುವರಿಯುವುದು)

ಭಾರತ ದೇಶಕೆ ಚೀನಾಯುದ್ಧ ಭಾರೀ ಯುದ್ಧನಮಾಡಿಸುವೆ ॥ ಧರ್ಮವ ನುಳಿಸಲು ದ್ರೋಹಿಗಳೆಲ್ಲಾ ಕೊಲ್ಲುತ ಭಾರತ ಕಾಯುವೆನು ॥ ೧೬ ॥

ದೇಶವ ಬಯಸದೆ | ಪಾರ್ಥಗೆ ಸಾರಥಿಯಾಗುತ ಭಕ್ತರ ಪಾಲಿಸಿದ ॥ ಗೀತೆಯ ಕೃಷ್ಣನು, ಕೃಷ್ಣನೆ ಗೀತೆಯು | ಗೀತೆಯು ಬಲದಲಿ ಕಾಯುವೆನು ॥

ನಾಸ್ತಿಕ ಧರ್ಮವ ನಾಶವ ಮಾಡುತ | ಭಾರತ ದೇಶವ ಕಾಯುವೆನು ॥ ಸತ್ಯವು ಶಾಂತಿ ಸಮತ್ವವ ತೋರುವ | ಭಾರತ ಧ್ವಜವದು ಹಿಡಿಯುವೆನು ॥

ಹಿಂದೆ ಮುದ್ರಿತವಾಗಿರುವ ಪ್ರೋಗ್ರಾಂ ಬದಲು

ಅಪೇರ — ಈ ದಿನ — ನಾಗಪೂಜೆ

ಗೋವಧೆಯೇ ಆಹಾರ ಸಮಸ್ಯೆಗೆ ಕಾರಣ

ವೈಸೂರು:— ಗೋವಧೆಯೇ ಆಹಾರ ಸಮಸ್ಯೆಗೆ ಕಾರಣ, ಲಕ್ಷಾಂತರ ಗೋವಧೆ ನಡೆಯುತ್ತಿದ್ದರೆ ಅವುಗಳ ಕಣ್ಣೀರು ಬಿದ್ದರೆ ಆಹಾರ ಅಭಾವಬಾರದೇ ಇನ್ನೇನಾದೀತು ಎಂದು ಡಾ|| ಬಿ ಜಿ ದಾಸರು ಈಚಿನ ಪುರಸಭೆಯ ವಿಶೇಷ ಸಭೆಯಲ್ಲಿ ತಿಳಿಸಿದರು ; ಜನ ನಮ್ಮ ಸರಕಾರಕ್ಕೆ ನೈತಿಕತೆ ಹೋಗಿರುವುದೇ ಇಂದಿನ ಆಹಾರ ಅಭಾವಕ್ಕೆ ಕಾರಣ ಸಹಾ ಆಗಿದೆ ; ಯಜ್ಞಯಾಗಾದಿಗಳು ನಡೆದರೆ ಕಾಲಕಾಲಕ್ಕೆ ಮಳೆ ಬೀಳುವುದು ; ಹಾಗಿಲ್ಲದೆ ಹೋದರೆ ಆಹಾರ ಉತ್ಪಾದನೆ ಆಗಬೇಕಾದರೆ ಆಗುವುದೇ ಎಂದು ಹೇಳಿದರು ; ಸರ್ಕಾರ ಒಂದು ಬೆಲೆ ಗೊಕ್ಕು ಮಾಡುವುದು, ವರ್ತಕರು ಮತ್ತೊಂದು ಬೆಲೆಯಲ್ಲಿ ಮಾರುವುದು ಹೀಗಾದರೆ ಅರ್ಥವೇನು ? ಬೆಲೆ ಇಳಿಯಲು ಸಾಧ್ಯವೇ ಎಂದೂ ಡಾ|| ದಾಸರು ತಿಳಿಸಿದರು.

೦ ೦ ೦

ಮತ್ತೆ ಅದೇ !

ಬೆಂಗಳೂರಿನಲ್ಲಿ ಒಂದು ನವೀನ ವಧಾಗೃಹವು ಒಂದೂವರೆ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕ್ಷಿಪ್ರದಲ್ಲೇ ನಿರ್ಮಾಣವಾಗುವುದೆಂದು ಪ್ರಕಟವಾಗಿದೆ : ಈಗ ಎಲಿಟಂ ವಧಾಗೃಹ ಇರುವ ಕೊರವಾಗಗಾತ್ರವಾದ ಕಣವೆಯಲ್ಲಿ ಸ್ಥಾಪನೆ ಆಗುವ ಸಂಭವವಿದೆ ಎಂದೂ ನಾಲ್ಕನೇ ಯೋಜನೆಯಲ್ಲಿ ಇದು ಸೇರಿದೆಯೆಂದೂ, ಕೇಂದ್ರ ನಿಪುಣ ಸಮಿತಿ ಸೋಡಿದೆಯೆಂದೂ ಪ್ರಕಟವಾಗಿದೆ

೦ ೦ ೦

ನಾಯಿಗಳ ದೈವಭಕ್ತಿ

ಉತ್ತರ ಬೀಹಾರಿನ ವೈರಜ್ಜಿಹಳ್ಳಿಯ ಶಿವದೇವಾಲಯದ ಬಾಗಿಲು ಮುಂದೆ ಬೆಳಿಗ್ಗೆ ಮತ್ತು ಸಂಜೆ ವೂಗಳ ತಿಯಾಗಟೆ ಹೊಡೆಯುವ ಸಮಯದಲ್ಲಿ ಎಂಡು ನಾಯಿಗಳು ಬಂದ ಭಕ್ತಿಯಾತಿಶಯವಾಗಿ ನಿಂತು ವಿನದಿಂದ ಕಣ್ಣೀರು ಸುರಿಸುತ್ತವೆ ; ಮಿಕ್ಕ ಹೊತ್ತಿನಲ್ಲಿ ಇತರ ನಾಯಿಗಳಂತೆ ಅಲ್ಲಿ ಇಲ್ಲಿ ಸುತ್ತಾಡಿಕೊಂಡಿರುತ್ತವೆ.

೦ ೦ ೦

ಕೃಷ್ಣಾ ನೀ ಬೇಗನೇ ಬಾರೋ !

ಮ್ಯಾನಿಚ್ (ಡಾಡ')— ಕೃಷ್ಣನ ಹೆಸರನ್ನು ಕೇಳಿ ಪುಲಕಿತನಾಗದ ಹಿಂದೂಗಳಿಲ್ಲವೆಂದರೆ, ಜರ್ಮನಿಗೂ ಹಾಗಾಯಿತೆಂಬ ಸ್ವಾರಸ್ಯದ ಸುದ್ದಿಯೊಂದು ಬಂದಿದೆ : ಮ್ಯಾನಿಚ್ಚಿನಲ್ಲಿ ಈಗ ವಿಶ್ವಸಾರಿಗೆ ಪ್ರದರ್ಶನವು ನಡೆಯುತ್ತಿದೆ. ಅದಲ್ಲಿ ಭಾರತವೂ ಭಾಗವಹಿಸಿದೆ: ಸ್ವಾಭಾವಿಕವಾಗಿಯೇ ಬಹು ಸಾಮಾನ್ಯಕ ಜರ್ಮನ್ನರನ್ನು ಆಕರ್ಷಿಸಿರುವ ಭಾರತದ ವಸ್ತುಗಳಲ್ಲಿ ಈಜಿಗೊಂದುದಿನ ಜರ್ಮನ್ನರಿಂದ ಕಿಕ್ಕಿರಿಯಲ್ಪಟ್ಟಿತ್ತು : ಅದಕ್ಕೆ ಕಾರಣ, ಕೃಷ್ಣಾ ನೀ ಬೇಗನೇ ಬಾರೊ ! ಭಾರತದ ಹೆಸರಾಂತ ನೃತ್ಯಕಲಾವಿದೆಯಾಲೊಬ್ಬರಾದ ಶ್ರೀಮತಿ ಯಾ ವಿ ನೀ ಕೃಷ್ಣಮೂರ್ತಿ ಈ ಸುಂದರ ಗೀತೆಗೆ ಅಭಿನಯ ಹಿಡಿದರು : ಹಾಡಿಗೂ ಅಭಿನಯಕ್ಕೂ ಮುಗ್ಧರಾಗದ ಜರ್ಮನರು ಇಲ್ಲವೆಂದು ಹೇಳಲಾಗಿದೆ (ಯು ಪಿ ಎಸ್)

೦ ೦ ೦ ೦

ಹೊಸ ಕನಾಟಕ ಪ್ರಾಣಿ ಸ್ಥಾಪನೆಯಲ್ಲಿ ಉತ್ಸಾಹ

ಕೇವಲ ಒಂದು ಶತಮಾನದ ಹಿಂದೆ ಬ್ರಿಟೀಷರ ಸಂಕಷ್ಟವಿದ್ದಾಗ ಅವರ ಸಂಬಳದಿಂದಲೆ ಜೀವನ ಸಾಗಿಸುತ್ತಿದ್ದ ಸೈನಿಕರು ಗುಂಡುಗಳಿಗೆ ಗೋವಿನ ಕೊಬ್ಬನ್ನು ಸವರಿದ್ದಾರೆಂದು ತಿಳಿದಕೂಡಲೇ ಭಯಂಕರವಾದ ಯುದ್ಧವನ್ನೇ ಮಾಡಿದರು ; ಈಗ ನಮ್ಮದೇ ಸರಕಾರ ಬಂದವೇಲೆ ಹೊಸಹೊಸ ಕಾರಾಗಾರ ಖಾನೆಯನ್ನು ಸ್ಥಾಪಿಸುವುದಲ್ಲಿ ಉತ್ಸಾಹ ತೋರಿದೆ : ನಮ್ಮ ಮುಖಂಡರು ಗಾಂಧೀ ಶಬ್ದದಂತೆ ರಾಜ್ಯಭಾರ ನಡೆಸುವುದಾಗಿ ತಿಳಿಸಿತ್ತಾರೆಯಲ್ಲ ; ಗಾಂಧಿಯವರು ಗೋವಿಗೆ ಹಿಂದೆ ಕೊಡುತ್ತಾರೆಂಬ ಕಾರಣದಿಂದ ಗೋವಿನ ಹತ್ಯಲನ್ನೇ ತ್ಯಜಿಸಿದ್ದರೆಂಬ ವಿಚಾರ ಮಾತ್ರ ಇವರಿಗೆ ತಿಳಿಯದಾಗಿರುವುದೇಕೋ ಗೊತ್ತಾಗುವುದಿಲ್ಲ

— ಎಸ ಅಯ್ಯಂಗಾರಿ.

ವುಡಲ್ಯಾಂಡ್ 20—8—65 ರಿಂದ
ಶಿಸು ಅಮೋಘ ಆರಂಭ

ಕಾಬಿಖಾರ್ (ಹಿಂದಿ) Kabli Khan

ಅಜಿತ್, ಹೆಲೆನ್, ಮುಮ್ತಾಜ್, ಜಯಂತ್ ಪಾತ್ರವಹಿಸಿರುವ

.... ಅತ್ಯಮೋಘ ಹಿಂದಿ ಚಿತ್ರ ....

ಸಂಗೀತ : ಚಿತ್ರಗುಪ್ತ — [ಪ್ರತಿ ದಿನ 3 ಪ್ರದರ್ಶನಗಳು

ಅಪೆರ— ಯಶಸ್ವಿ 2 ನೇ ವಾರ

ನರಸಾ, ಬಿ. ಎ.

ಪಾತ್ರ— ಭಾನುಮತಿ, ಬಾಲರಾಜ್, ಎಂ ಆರ್ ರಾಧಾ, ತಾಯಿ ನಾಗೇಶ್

ಅಮೋಘ ತಮಿಳು ಸಾಂಸಾರಿಕ ಚಿತ್ರ] [ಪ್ರತಿ ದಿನ 3 ಆಟಗಳು

SHAKTI SUDHA

A Superb Tonic



Protect the Cow

ಗೋವಂಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳ ಪೆಜ್ಜಿಚ್ಛಾಗಿ ಸಡೆಯಲಿ

Edited, Printed & Published by Dharma'prachara nirata
M S Krishna Rao (Proprietor) at the Satyavadi Press
Chamarajapuram, Mysore 4